ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು-1

ಸಂಖ್ಯೆ:-ಸಿ1(4)ಸ.ಪ್ರೌ.ಶಾ.ಮು.ಶಿ.ವ:101/2009-10

ದಿನಾಂಕ:05-04-2010

## ಅಧಿಸೂಚನೆ

ವಿಷಯ: 2010-11ನೇ ಸಾಲಿನ ಸರ್ಕಾರಿ ಪ್ರೌಢ ಶಾಲಾ ಮುಖ್ಯ ಶಿಕ್ಷಕರ ವರ್ಗಾವಣೆಗಳನ್ನು ಕಂಪ್ಯೂಟರ್ ವ್ಯವಸ್ಥೆ ಮೂಲಕ ಮಾಡುವ ಬಗ್ಗೆ ಮಾರ್ಗಸೂಚಿ.

ಉಲ್ಲೇಖ: 1.ಸರ್ಕಾರದ ಅಧಿಸೂಚನೆ ಸಂಖ್ಯೆ: ಸಂವ್ಯಶಾಇ 1 ಶಾಸನ 2007 ದಿ:01.09.2007
2.ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 173 ಇಟಿಆರ್ 2007 ದಿ:15.10.2007
3.ಸರ್ಕಾರದ ಅಧಿಸೂಚನೆ ಸಂಖ್ಯೆ:ಇಡಿ 173 ಇಟಿಆರ್ 2007 ದಿ:14.11.2007
4.ಸರ್ಕಾರದ ಪತ್ರಸಂಖ್ಯೆ: ಇಡಿ. 37 ಇಟಿಆರ್.2009 (ಪಿ) ದಿ:11.03.2010

-&&&-

ಉಲ್ಲೇಖ-1ರ ಸರ್ಕಾರದ ಅಧಿಸೂಚನೆಯಲ್ಲಿ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) ಅಧಿನಿಯಮ 2007 ಜಾರಿಗೆ ಬಂದಿರುತ್ತದೆ. ಇದರ ಅನ್ವಯ ಉಲ್ಲೇಖ-2ರ ಸರ್ಕಾರದ ಅಧಿಸೂಚನೆಯಲ್ಲಿ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) ನಿಯಮಗಳು 2007ನ್ನು ರೂಪಿಸಲಾಗಿದೆ. ಉಲ್ಲೇಖ-3ರ ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ.173.ಇಟಿಆರ್.2007 ದಿನಾಂಕ: 14.11.2007ರಲ್ಲಿ ಎ, ಬಿ, ಸಿ, ವಲಯದ ವರ್ಗೀಕರಣದ ಪ್ರದೇಶ ಹಾಗೂ ವ್ಯಾಪ್ತಿಯನ್ನು ಅಧಿಸೂಚಿಸಲಾಗಿದೆ.

ಮೇಲಿನ ಆದೇಶಗಳಂತೆ ಸಾರ್ವಜನಿಕ ಶಿಕ್ಷಣ ಇಲಾಖೆಯ ಸರ್ಕಾರಿ ಪ್ರೌಢಶಾಲಾ ಮುಖ್ಯ ಶಿಕ್ಷಕರ ವೃಂದದ ಅಧಿಕಾರಿಗಳ ವರ್ಗಾವಣೆಗಳನ್ನು 2010ರ ಎಪ್ರಿಲ್ / ಮೇ ಮಾಹೆಯಲ್ಲಿ ನಡೆಸಬೇಕಾಗಿರುತ್ತದೆ. ವರ್ಗಾವಣೆ ಬಯಸುವವರು ಅರ್ಜಿಗಳನ್ನು ಇಂಟರ್‌ನೆಟ್ ಮೂಲಕ ಮಾತ್ರ ಸಲ್ಲಿಸಬೇಕಾಗಿರುತ್ತದೆ. ಖುದ್ದಾಗಿ ಅಥವಾ ಟಪಾಲು ಮೂಲಕ ಲಿಖಿತವಾಗಿ ಸಲ್ಲಿಸಿದ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ ಮತ್ತು ಪರಿಗಣಿಸಲಾಗುವುದಿಲ್ಲ. ವರ್ಗಾವಣೆ ಪ್ರಕ್ರಿಯೆಗೆ ವೇಳಾಪಟ್ಟಿಯನ್ನು ಕೆಳಗಿನಂತೆ ನಿಗದಿಪಡಿಸಿದೆ:

| ಕ್ರ.ಸಂ | ವಿವರ | ದಿನಾಂಕ | ಕ್ರಮ ವಹಿಸುವ ಅಧಿಕಾರಿಗಳು |
|---|---|---|---|
| 1 | ಎ.ಬಿ.ಸಿ. ವಲಯಗಳಂತೆ ಸರ್ಕಾರಿ ಪ್ರೌಢ ಶಾಲೆಗಳು / ಸರ್ಕಾರಿ ಸಂಯುಕ್ತ ಪದವಿ ಪೂರ್ವ ಕಾಲೇಜುಗಳು / ಡಯಟ್‌ಗಳು / ಟಿಟಿಐಗಳು ಮತ್ತು ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ಕಛೇರಿಗಳ ಪಟ್ಟಿಯನ್ನು ವೆಬ್‌ಸೈಟ್‌ನಲ್ಲಿ ಪ್ರಕಟಿಸುವ ದಿನಾಂಕ | 05.04.2010 | ಜಿಲ್ಲಾ ಉಪನಿರ್ದೇಶಕರು (ಆಡಳಿತ)<br>ಹಿರಿಯ ಸಹಾಯಕ ನಿರ್ದೇಶಕರು ಇ-ಆಡಳಿತ, ಬೆಂಗಳೂರು |
| 2 | ವರ್ಗಾವಣೆಯ ಬಗ್ಗೆ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಉಪನಿರ್ದೇಶಕರವರ ಕಛೇರಿಯ ನೋಡಲ್ ಅಧಿಕಾರಿಗಳು ಹಾಗು ನೌಕರರಿಗೆ ವಿಭಾಗ ವಾರು ತರಬೇತಿ | 15.04.2010 ರಿಂದ 16.04.2010 | ಆಯುಕ್ತರ ಕಛೇರಿಯ ಸಿಬ್ಬಂದಿ |

| | | | |
|---|---|---|---|
| 3 | ವರ್ಗಾವಣೆ ಬಯಸುವ ಸರ್ಕಾರಿ ಪ್ರೌಢಶಾಲಾ ಮುಖ್ಯ ಶಿಕ್ಷಕರ ವೃಂದದ ಅಧಿಕಾರಿಗಳಿಂದ ಅರ್ಜಿಗಳನ್ನು ಕರೆಯಲು ಪ್ರಕಟಣೆ | 12.04.2010 | 1.ಆಯುಕ್ತರ ಕಛೇರಿ, ಬೆಂಗಳೂರು<br>2.ಅಪರ ಆಯುಕ್ತರ ಕಛೇರಿ, ಧಾರವಾಡ<br>3.ಅಪರ ಆಯುಕ್ತರ ಕಛೇರಿ, ಗುಲ್ಬರ್ಗಾ<br>4.ಉಪನಿರ್ದೇಶಕರು [ಆಡಳಿತ]<br>5.ಕ್ಷೇತ್ರ ಶಿಕ್ಷಣಾಧಿಕಾರಿಗಳು |
| 4 | ಸರ್ಕಾರಿ ಪ್ರೌಢಶಾಲೆಗಳ ಮುಖ್ಯ ಶಿಕ್ಷಕರ ವೃಂದದ ಖಾಲಿ ಹುದ್ದೆಗಳ ಪ್ರಕಟಣೆ | 13.04.2010 | 1.ಆಯುಕ್ತರ ಕಛೇರಿ, ಬೆಂಗಳೂರು<br>2.ಅಪರ ಆಯುಕ್ತರ ಕಛೇರಿ, ಧಾರವಾಡ<br>3.ಅಪರ ಆಯುಕ್ತರ ಕಛೇರಿ, ಗುಲ್ಬರ್ಗಾ<br>4.ಉಪನಿರ್ದೇಶಕರು [ಆಡಳಿತ]<br>5.ಕ್ಷೇತ್ರ ಶಿಕ್ಷಣಾಧಿಕಾರಿಗಳು |
| 5 | ವರ್ಗಾವಣೆ ಕೋರುವ ಸರ್ಕಾರಿ ಪ್ರೌಢಶಾಲಾ ಮುಖ್ಯ ಶಿಕ್ಷಕರ ವೃಂದದ ಅಧಿಕಾರಿಗಳು ಅಂತರ್ಜಾಲದ [Internet] ಮೂಲಕ ಇಲಾಖೆ ನಿಗದಿತ ಪಡಿಸಿರುವ ನಮೂನೆಯಲ್ಲಿ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ | 22.04.2010 | ಸರ್ಕಾರಿ ಪ್ರೌಢಶಾಲಾ ಮುಖ್ಯ ಶಿಕ್ಷಕರ ವೃಂದದ ಅಧಿಕಾರಿಗಳು |
| 6 | ಉಪನಿರ್ದೇಶಕರುಗಳ ಹಂತದಲ್ಲಿ ಅಂತರ್ಜಾಲದ [Internet] ಮೂಲಕ ಅರ್ಜಿ ಗಳ ಪರಿಶೀಲನೆ, ಮಾಹಿತಿ ದೃಢೀಕರಣ ಹಾಗು ಸಂಬಂಧಿಸಿದ ವರ್ಗಾವಣಾ ಪ್ರಾಧಿಕಾರಕ್ಕೆ ವರ್ಗಾಯಿಸಲು ಕೊನೆಯ ದಿನಾಂಕ | 24.04.2010 | ಜಿಲ್ಲಾ ಉಪನಿರ್ದೇಶಕರು [ಆಡಳಿತ]<br>ಕೇಂದ್ರ ಕಛೇರಿಗಳ ಮುಖ್ಯಸ್ಥರು |
| 7 | ಉಪನಿರ್ದೇಶಕರು [ಆಡಳಿತ] ಹಾಗು ಕಛೇರಿ ಮುಖ್ಯಸ್ಥರು ಅಭ್ಯರ್ಥಿಗಳಿಂದ ಪಡೆದ ಆದ್ಯತೆಯ ಮೂಲ ಪ್ರಮಾಣ ಪತ್ರಗಳನ್ನು ಸಂಬಂಧಿಸಿದ ವರ್ಗಾವಣಾ ಪ್ರಾಧಿಕಾರಕ್ಕೆ ಸಲ್ಲಿಸಲು ಕೊನೆಯ ದಿನಾಂಕ. | 26.04.2010 | ಜಿಲ್ಲಾ ಉಪನಿರ್ದೇಶಕರು [ಆಡಳಿತ]<br>ಕೇಂದ್ರ ಕಛೇರಿಗಳ ಮುಖ್ಯಸ್ಥರು |
| 8 | ತಾತ್ಕಾಲಿಕ ಆದ್ಯತಾ ಪಟ್ಟಿ ಪ್ರಕಟಣೆ ಕ್ಷೇತ್ರ ಶಿಕ್ಷಣಾಧಿಕಾರಿಗಳು / ಉಪನಿರ್ದೇಶಕರು ಹಾಗೂ ಆಯುಕ್ತರ ಕಛೇರಿಗಳ ಸೂಚನ ಫಲಕದಲ್ಲಿ ಮತ್ತು ಇಲಾಖೆಯ ವೆಬ್‌ಸೈಟ್‌ನಲ್ಲಿ | 05.05.2010 | 1.ಆಯುಕ್ತರ ಕಛೇರಿ, ಬೆಂಗಳೂರು<br>2.ಅಪರ ಆಯುಕ್ತರ ಕಛೇರಿ, ಧಾರವಾಡ<br>3.ಅಪರ ಆಯುಕ್ತರ ಕಛೇರಿ, ಗುಲ್ಬರ್ಗಾ<br>4.ಉಪನಿರ್ದೇಶಕರು [ಆಡಳಿತ]<br>5.ಕ್ಷೇತ್ರ ಶಿಕ್ಷಣಾಧಿಕಾರಿಗಳು |

| | | | |
|---|---|---|---|
| 9 | ತಾತ್ಕಾಲಿಕ ಆದ್ಯತಾ ಪಟ್ಟಿಗೆ ಆಕ್ಷೇಪಣೆಗಳನ್ನು Internet ಮೂಲಕ ಸಲ್ಲಿಸಲು ಕೊನೆಯ ದಿನಾಂಕ | 12.05.2010 | ಸಂಬಂಧಿಸಿದ ಸರ್ಕಾರಿ ಪ್ರೌಢಶಾಲಾ ಮುಖ್ಯ ಶಿಕ್ಷಕರ ವೃಂದದ ಅಧಿಕಾರಿಗಳು |
| 10 | ಬಂದಂತಹ ಆಕ್ಷೇಪಣೆಗಳನ್ನು ಜಿಲ್ಲಾ ಉಪನಿರ್ದೇಶಕರು (ಆಡಳಿತ) ಇವರು ಆಯಾ ಆಯುಕ್ತರಿಗೆ ಸಲ್ಲಿಸಲು ಕೊನೆಯ ದಿನಾಂಕ [ಮುದ್ದಾಂ ತಲುಪಿಸುವುದು] | 13.05.2010 | ಜಿಲ್ಲಾ ಉಪನಿರ್ದೇಶಕರು (ಆಡಳಿತ) |
| 11 | 1. ಅಂತಿಮ ಆದ್ಯಾತ ಪಟ್ಟಿ ಪ್ರಕಟಣೆ<br>2. ಪರಸ್ಪರ ವರ್ಗಾವಣೆ ಪಟ್ಟಿ ಪ್ರಕಟಣೆ<br>3. ಖಾಲಿ ಹುದ್ದೆಗಳ ಅಂತಿಮ ಪಟ್ಟಿ ಪ್ರಕಟಣೆ | 19.05.2010 | 1.ಆಯುಕ್ತರ ಕಛೇರಿ, ಬೆಂಗಳೂರು<br>2.ಅಪರ ಆಯುಕ್ತರ ಕಛೇರಿ, ಧಾರವಾಡ<br>3.ಅಪರ ಆಯುಕ್ತರ ಕಛೇರಿ, ಗುಲ್ಬರ್ಗಾ<br>ಇಲಾಖಾ ವೆಬ್‌ಸೈಟ್‌ನಲ್ಲಿ |
| 12 | 1. ಪರಸ್ಪರ ವರ್ಗಾವಣೆಗೆ ಕೌನ್ಸೆಲಿಂಗ್‌ಗೆ ಹಾಜರಾಗುವ ದಿನಾಂಕ<br><br>2. ಪರಸ್ಪರ ವರ್ಗಾವಣೆ ಜಾರಿಗೊಳಿಸುವ ದಿನಾಂಕ | 20.05.2010<br><br>20.05.2010 | ಸಂಬಂಧಿಸಿದ ಸರ್ಕಾರಿ ಪ್ರೌಢ ಶಾಲಾ ಮುಖ್ಯ ಶಿಕ್ಷಕರ ವೃಂದದ ಅಧಿಕಾರಿಗಳು.<br><br>1.ಆಯುಕ್ತರ ಕಛೇರಿ, ಬೆಂಗಳೂರು<br>2.ಅಪರ ಆಯುಕ್ತರ ಕಛೇರಿ, ಧಾರವಾಡ<br>3.ಅಪರ ಆಯುಕ್ತರ ಕಛೇರಿ, ಗುಲ್ಬರ್ಗಾ |
| 13 | ಆಯಾ ಆಯುಕ್ತರ ವ್ಯಾಪ್ತಿಯೊಳಗೆ [ಘಟಕದೊಳಗೆ] ಕೋರಿಕೆ ವರ್ಗಾವಣೆಗಳಿಗೆ ಕೌನ್ಸೆಲಿಂಗ್ | 21.05.2010 | 1.ಆಯುಕ್ತರ ಕಛೇರಿ, ಬೆಂಗಳೂರು<br>2.ಅಪರ ಆಯುಕ್ತರ ಕಛೇರಿ, ಧಾರವಾಡ<br>3.ಅಪರ ಆಯುಕ್ತರ ಕಛೇರಿ, ಗುಲ್ಬರ್ಗಾ |
| 14 | ಆಯಾ ಆಯುಕ್ತರ ವ್ಯಾಪ್ತಿಯ ಹೊರಗಿನ [ಅಂತರ ಘಟಕ] ಕೋರಿಕೆ ವರ್ಗಾವಣೆಗಳಿಗೆ ಕೌನ್ಸೆಲಿಂಗ್ | 22.05.2010 | 1.ಆಯುಕ್ತರ ಕಛೇರಿ, ಬೆಂಗಳೂರು<br>2.ಅಪರ ಆಯುಕ್ತರ ಕಛೇರಿ, ಧಾರವಾಡ<br>3.ಅಪರ ಆಯುಕ್ತರ ಕಛೇರಿ, ಗುಲ್ಬರ್ಗಾ |
| 15 | ದೂರಿನ ಮೇಲೆ ವರ್ಗಾವಣೆ ಪ್ರಕರಣಗಳು | 27.05.2010 | 1.ಆಯುಕ್ತರ ಕಛೇರಿ, ಬೆಂಗಳೂರು<br>2.ಅಪರ ಆಯುಕ್ತರ ಕಛೇರಿ, ಧಾರವಾಡ<br>3.ಅಪರ ಆಯುಕ್ತರ ಕಛೇರಿ, ಗುಲ್ಬರ್ಗಾ |

2010ನೇ ಏಪ್ರಿಲ್ / ಮೇ ಮಾಹೆಯಲ್ಲಿ ನಡೆಯುವ ಸಾಮಾನ್ಯ ವರ್ಗಾವಣೆಗೆ ಸರ್ಕಾರಿ ಪ್ರೌಢ ಶಾಲಾ ಮುಖ್ಯ ಶಿಕ್ಷಕರ ವೃಂದದ ಅಧಿಕಾರಿಗಳು ಅಂತರ್ಜಾಲದ [Internet] ಮೂಲಕ ಅರ್ಜಿಗಳನ್ನು ಸಲ್ಲಿಸುವ ವಿಧಾನವನ್ನು ಈ ಕೆಳಗೆ ಪ್ಯಾರಾ 1 ರಿಂದ 7 ರಲ್ಲಿ ನೀಡಲಾಗಿದೆ.

1. ಸರ್ಕಾರದ ಅಧಿಸೂಚನೆ ಸಂಖ್ಯೆ:ಇಡಿ 173 ಇಟಿಆರ್ 2007 ದಿನಾಂಕ: 15.10.2007 ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) ನಿಯಮಗಳು 2007ರ ನಿಯಮ 6 ರಂತೆ ಸರ್ಕಾರಿ ಪ್ರೌಢ ಶಾಲಾ ಮುಖ್ಯ ಶಿಕ್ಷಕರು ಹಾಗೂ ತತ್ಸಮಾನ ವೃಂದಕ್ಕೆ ಸಂಬಂಧಪಟ್ಟ ವರ್ಗಾವಣೆ ಅರ್ಜಿಗಳನ್ನು [1. ಜ್ಯೇಷ್ಠತಾ ಘಟಕ ಒಳಗೆ/ಘಟಕದ ಹೊರಗೆ. 2. ಪರಸ್ಪರ] ನಿರ್ದಿಷ್ಟ ಪಡಿಸಿರುವ ಎರಡು ಅರ್ಜಿ ನಮೂನೆಗಳನ್ನು ಇಲಾಖೆಯ ವೆಬ್‌ಸೈಟ್ **www.schooleducation.kar.nic.in** ನಲ್ಲಿ ಪ್ರಕಟಿಸಲಾಗುತ್ತದೆ.

2. ಸರ್ಕಾರಿ ಪ್ರೌಢಶಾಲೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಮುಖ್ಯ ಶಿಕ್ಷಕರು, ಸರ್ಕಾರಿ ಸಂಯುಕ್ತ ಪದವಿ ಪೂರ್ವ ಕಾಲೇಜುಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಉಪಪ್ರಾಂಶುಪಾಲರು ಹಾಗು ಕಛೇರಿಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಮುಖ್ಯ ಶಿಕ್ಷಕರ ವೃಂದದ ಅಧಿಕಾರಿಗಳು ಕೋರಿಕೆ ಮೇಲೆ ವರ್ಗಾವಣೆಗೆ ಅರ್ಜಿ ಸಲ್ಲಿಸುವುದಾದಲ್ಲಿ ಇಲಾಖೆಯ ಸದರಿ ವೆಬ್‌ಸೈಟಿನಲ್ಲಿ ನಿಗದಿಪಡಿಸಿರುವ ಕೊನೆಯ ದಿನಾಂಕದ ಒಳಗೆ ಅರ್ಜಿಯನ್ನು ಭರ್ತಿ ಮಾಡಬೇಕು. ಪರಸ್ಪರ ವರ್ಗಾವಣೆಗೆ ಅರ್ಜಿ ಸಲ್ಲಿಸುವವರು ಸಹ ಇಲಾಖೆಯ ವೆಬ್‌ಸೈಟಿನಲ್ಲಿ ನಿಗದಿಪಡಿಸಿರುವ ಕೊನೆಯ ದಿನಾಂಕದ ಒಳಗೆ ಅರ್ಜಿ ಭರ್ತಿ ಮಾಡಬೇಕು.

3. ಸರ್ಕಾರಿ ಪ್ರೌಢ ಶಾಲಾ ಮುಖ್ಯ ಶಿಕ್ಷಕರ ವೃಂದದ ಅಧಿಕಾರಿಗಳು ಅಂತರ್ಜಾಲದ ಮೂಲಕ ಸಲ್ಲಿಸಿದ ವರ್ಗಾವಣೆ ಅರ್ಜಿಗಳಲ್ಲಿನ ಸೇವಾ ವಿವರಗಳು ಸರಿಯಿದೆಯೇ ಎಂಬುದನ್ನು ಜಿಲ್ಲಾ ಉಪನಿರ್ದೇಶಕರು (ಆಡಳಿತ) ರವರು ಹಾಗು ಕೇಂದ್ರ ಕಛೇರಿ ಮುಖ್ಯಸ್ಥರು ಅವರುಗಳಿಗೆ ನೀಡಿರುವ ಪ್ರತ್ಯೇಕ ಸೂಚನೆಗಳನ್ನು ಪರಿಪಾಲಿಸಿ ಕಂಪ್ಯೂಟರ್‌ನಲ್ಲಿ ಪರಿಶೀಲಿಸತಕ್ಕದ್ದು ಮತ್ತು ಅಭ್ಯರ್ಥಿ ಸಮುಖ್ಖದಲ್ಲಿ ಪ್ರಮಾಣೀಕರಿಸತಕ್ಕದ್ದು. ಪ್ರಮಾಣೀಕರಿಸುವ ಬಗ್ಗೆ ಸಹ ವಿವರವಾದ ಸೂಚನೆಗಳನ್ನು ಪ್ರತ್ಯೇಕವಾಗಿ ನೀಡಲಾಗಿದೆ.

4. ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 173 ಇಟಿಆರ್ 2007 ದಿನಾಂಕ: 14.11.2007 ರಲ್ಲಿ ಅಧಿಸೂಚಿಸಲಾಗಿರುವ ಅನುಸಾರ ಅಧಿಕಾರಿಗಳು ಸರ್ಕಾರಿ ಸೇವೆಗೆ ನೇಮಕಗೊಂಡ ದಿನಾಂಕದಿಂದ ಇಲ್ಲಿಯವರೆಗೆ ಎಲ್ಲಾ ವೃಂದಗಳಲ್ಲಿ ಎ, ಬಿ, ಸಿ ವಲಯಗಳಲ್ಲಿ ಸಲ್ಲಿಸಿರುವ ಸೇವೆಯನ್ನು ಸರಿಯಾಗಿ ದಾಖಲು ಮಾಡಿದ್ದಾರೆಯೆ ಎಂಬ ಬಗ್ಗೆಯೂ ಸಹ ಜಿಲ್ಲಾ ಉಪನಿರ್ದೇಶಕರು [ಆಡಳಿತ] ರವರು ಪರಿಶೀಲಿಸಿ ಪ್ರಮಾಣೀಕರಿಸತಕ್ಕದ್ದು. ವೆಬ್‌ಸೈಟಿನಲ್ಲಿ ಪರಿಶೀಲಿಸಿ ಪ್ರಮಾಣೀಕರಿಸುವ ವಿಧಾನವನ್ನು ಸಹ ಪ್ರತ್ಯೇಕವಾಗಿ ತಿಳಿಸಲಾಗುವುದು.

5. ಇಲಾಖೆಯ ವೆಬ್‌ಸೈಟ್‌ನಲ್ಲಿ ದಾಖಲಾದ ಅರ್ಜಿಗಳನ್ನು ಪ್ರತಿದಿನ ಸಂಬಂಧಿಸಿದ ಅಧಿಕಾರಿಗಳು ಅವರಿಗೆ ನೀಡಿದ user ID ಮತ್ತು password ಗಳನ್ನು ಉಪಯೋಗಿಸಿ ವೆಬ್‌ಸೈಟ್‌ಗೆ ಪ್ರವೇಶ ಪಡೆದು ದಾಖಲೆಗಳ ಆಧಾರದ ಮೇಲೆ ಪರಿಶೀಲಿಸಬೇಕು. ಮಾಹಿತಿಗಳು ಸರಿ ಇವೆ ಎಂದು ಖಚಿತವಾದ ನಂತರ ಅಥವಾ ತಿದ್ದುಪಡಿ ಮಾಡಿದ ನಂತರ ಅರ್ಜಿಯ ಪ್ರತಿಯನ್ನು ಮುದ್ರಿಸಿ ಸಹಿ ಮತ್ತು ಸೀಲು ಹಾಕಿ ದೃಢೀಕರಿಸಿ ಪ್ರತಿಯನ್ನು ಉಪನಿರ್ದೇಶಕರ ಕಛೇರಿಯಲ್ಲಿ ರಕ್ಷಾ ಕಡತದಲ್ಲಿಡುವುದು. (ಪರಿಶೀಲನೆ ಅವಶ್ಯವೆಂಬ ಸಂದರ್ಭದಲ್ಲಿ ಹಾಜರುಪಡಿಸುವುದು) ಸರ್ಕಾರದ ಆದೇಶ ಮತ್ತು ನಿಯಮಗಳು ಹಾಗೂ ವೇಳಾಪಟ್ಟಿಯಂತೆ ಸಂಬಂಧಿಸಿದ ಅಧಿಕಾರಿಗಳು ಕರ್ತವ್ಯಗಳನ್ನು ನಿರ್ವಹಿಸಲು ತಿಳಿಸಿದೆ.

6. ಉಪನಿರ್ದೇಶಕರು (ಆಡಳಿತ) ರವರು ಅವರ ಆಡಳಿತ ವ್ಯಾಪ್ತಿಯ ಎಲ್ಲಾ ಸರ್ಕಾರಿ ಪ್ರೌಢ ಶಾಲೆಗಳು, ಸರ್ಕಾರಿ ಸಂಯುಕ್ತ ಪದವಿ ಪೂರ್ವ ಕಾಲೇಜುಗಳು ಹಾಗೂ ಕಛೇರಿಗಳನ್ನು ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 173 ಇಟಿಆರ್ 2007 ದಿನಾಂಕ:14.11.2007ರಲ್ಲಿ ಅಧಿಸೂಚಿಸಲಾಗಿರುವ ಅನುಸಾರ ಎ, ಬಿ, ಸಿ, ವಲಯಗಳೆಂದು ವರ್ಗೀಕರಿಸಿ, ದಿನಾಂಕ:05.04.2010ರಂದು ಅವರವರ ಕಛೇರಿ ಸೂಚನಾ ಫಲಕದಲ್ಲಿ ಪ್ರಕಟಿಸುವುದು. ಅದರ ಸಾಫ್ಟ್ ಪ್ರತಿಯನ್ನು ಇ-ಆಡಳಿತ ಶಾಖೆಯ ಮೇಲ್ ವಿಳಾಸಕ್ಕೆ ವೆಬ್ ಸೈಟ್‌ನಲ್ಲಿ ಅಳವಡಿಸಲು ಹಾಗೂ ಮುದ್ರಿತ ಪ್ರತಿಯೊಂದನ್ನು ದೃಢೀಕರಿಸಿ ಈ ಕಛೇರಿಗೆ ದಿನಾಂಕ: 05.04.2010 ರೊಳಗೆ ತಲುಪುವಂತೆ ಕಳುಹಿಸುವುದು.

7. ಉಲ್ಲೇಖ-1, 2, ಮತ್ತು 3ರ ಸರ್ಕಾರದ ಆದೇಶಗಳನ್ವಯ ಹಾಗೂ ವೇಳಾಪಟ್ಟಿಯ ಪ್ರಕಾರ 2010ನೇ ಸಾಲಿನ ಸಾರ್ವಜನಿಕ ಶಿಕ್ಷಣ ಇಲಾಖೆಯ ಸರ್ಕಾರಿ ಪ್ರೌಢಶಾಲಾ ಮುಖ್ಯ ಶಿಕ್ಷಕರ ವೃಂದದ ಅಧಿಕಾರಿಗಳ ವರ್ಗಾವಣೆಗಳನ್ನು ಸಕ್ಷಮ ಪ್ರಾಧಿಕಾರಿಗಳು ಅವರವರ ಆಡಳಿತ ವ್ಯಾಪ್ತಿಯಲ್ಲಿ ಮಾಡಲು ಅಪರ ಆಯುಕ್ತರು ಗುಲ್ಬರ್ಗಾ ಮತ್ತು ಅಪರ ಆಯುಕ್ತರು, ಧಾರವಾಡ ರವರು ಕ್ರಮ ವಹಿಸುವಂತೆ ತಿಳಿಸಿದೆ.

(ಬಿ.ಎ. ಹರೀಶ್ ಗೌಡ)
ಆಯುಕ್ತರು
ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು

ಗೆ,

ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ಉಪನಿರ್ದೇಶಕರು (ಆಡಳಿತ) ರವರಿಗೆ ಮುಂದಿನ ಕ್ರಮಕ್ಕಾಗಿ

ಪ್ರತಿಯನ್ನು:-

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ) ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು-1 ಇವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
2. ಆಪ್ತ ಕಾರ್ಯದರ್ಶಿಯವರು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು, ಕರ್ನಾಟಕ ಸರ್ಕಾರ, ವಿಧಾನ ಸೌಧ, ಬೆಂಗಳೂರು ಇವರಿಗೆ ಮಾಹಿತಿಗಾಗಿ
3. ರಾಜ್ಯ ಯೋಜನಾ ನಿರ್ದೇಶಕರು, ಸರ್ವ ಶಿಕ್ಷಣ ಅಭಿಯಾನ, ರಾಜ್ಯ ಯೋಜನಾ ನಿರ್ದೇಶಕರ ಕಛೇರಿ ಬೆಂಗಳೂರು
4. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಗುಲಬರ್ಗಾ
5. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ
6. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳವರಿಗೆ
7. ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ನಿರ್ದೇಶಕರುಗಳಿಗೆ
8. ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ಸಹನಿರ್ದೇಶಕರು ಹಾಗೂ ಪದನಿಮಿತ್ತ ವಿಭಾಗೀಯ ಕಾರ್ಯದರ್ಶಿಗಳು
9. ಸಹ ನಿರ್ದೇಶಕರು, ಮದ್ಯಾಹ್ನ ಉಪಹಾರ ಯೋಜನೆ, ಕೆ.ಜಿ.ರಸ್ತೆ, ಬೆಂಗಳೂರು
10. ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ಉಪನಿರ್ದೇಶಕರು (ಅಭಿವೃದ್ಧಿ) ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ (ಡಯಟ್)
11. ರಾಜ್ಯದ ಎಲ್ಲಾ ತಾಲ್ಲೂಕ್ ಪಂಚಾಯತ್ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳವರಿಗೆ.
12. ಆಯುಕ್ತರ ಆಪ್ತ ಕಾರ್ಯದರ್ಶಿಯವರಿಗೆ ಮಾಹಿತಿಗಾಗಿ
13. ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ
14. ಹಿರಿಯ ಸಹಾಯಕ ನಿರ್ದೇಶಕರು, ಇ-ಆಡಳಿತ ಘಟಕ, ಆಯುಕ್ತರ ಕಛೇರಿ, ಸಾ.ಶಿ.ಇಲಾಖೆ, ಬೆಂಗಳೂರು
15. ಕಛೇರಿ ಪ್ರತಿ